# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1319/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:03/12/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕು, ನಿಪನಾಳ ಗ್ರಾಮ ಪಂಚಾಯಿತಿಯ, ಗ್ರಾಮ ಲೆಕ್ಕಾಧಿಕಾರಿ, **ಶ್ರೀ ಅಪ್ಪಾಸಾಬ ಬುಜಬಲಿ ನೇಮನ್ನವರ, ಬಿನ್. ಬುಜಬಲಿ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಳಗಾವಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಅಪ್ಪಾಸಾಬ ಬುಜಬಲಿ ನೇಮನ್ನವರ, ಬಿನ್. ಬುಜಬಲಿ, ಗ್ರಾಮ ಲೆಕ್ಕಾಧಿಕಾರಿ, ನಿಪನಾಳ ಗ್ರಾಮ, ರಾಯಭಾಗ ತಾಲೂಕು: ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಮಾಳಪ್ಪಾ ರಾಮಪ್ಪಾ ಮಾಯನ್ನವರ @ ಉಪ್ಪಾರ, ಸಾ: ನಿಪನಾಳ ಗ್ರಾಮ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು, ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬೆಳಗಾವಿ, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:15/2018** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೊಟಕ್ಕೆ ಕಂಡು ಬರುತ್ತದೆ.

i. ದೂರುದಾರರ ತಂದೆ ರಾಮಪ್ಪಾ ಸಿದ್ದಪ್ಪಾ ಮಾಯನ್ನವರ @ ಉಪ್ಪಾರವರ ಹೆಸರಿನಲ್ಲಿ ನಿಪನಾಳ ಗ್ರಾಮದ ರಿ.ಸರ್ವೆ.ನಂ.80/2ರಲ್ಲಿ ಒಟ್ಟು ಕ್ಷೇತ್ರ 03-36 ಗುಂಟೆ ಜಮೀನು ಇದ್ದು, ಸದರಿ ಜಮೀನುಗಳು 5-ಜನ ಬೇರೆಯವರ ಹೆಸರಿಗೆ ಅವೈಜ್ಞಾನಿಕವಾಗಿ 2018ರಲ್ಲಿ ಹಿಸ್ಸೆ ಮಾಡಿದ್ದು, ಹಿಸ್ಸಾ ನಮೂನೆ 4ರ ಪ್ರಕಾರ ಪಹಣಿ ಪತ್ರಿಕೆಯ ಕಾಲಂ ನಂ.9ರಲ್ಲಿ ಸರಿಪಡಿಸುವ ಕುರಿತು ದೂರುದಾರರು ಎದುರುದಾರರನ್ನು ಭೇಟಿಯಾಗಿ ವಿಚಾರಿಸಿದಾಗ, ಎದುರುದಾರರು ತಹಶೀಲ್ದಾರ್, ರಾಯಭಾಗ ಸಾಹೇಬರಿಗೆ ಅರ್ಜಿ ಕೊಡಿ, ನಾನು ಮಾಡಿ ಕೊಡುತ್ತೇನೆ ಅಂತಾ ತಿಳಿಸಿರುತ್ತಾರೆ. ಅದರಂತೆ ದಿನಾಂಕ: 23/06/2018ರಂದು ತಹಶೀಲ್ದಾರ, ರಾಯಭಾಗ, ಇವರಿಗೆ ತಂದೆಯವರ ಹೆಸರಿನಲ್ಲಿ ಅರ್ಜಿ ನೀಡಿದ್ದು, ಸುಮಾರು ಮೂರು

ತಿಂಗಳಾದರೂ ಕೆಲಸ ಆಗದಿದ್ದಾಗ, ಎದುರುದಾರರನ್ನು ಭೇಟಿಯಾಗಿ ವಿಚಾರಿಸಿದಾಗ, ಹಾಗೇ ಕೆಲಸ ಆಗುವುದಿಲ್ಲಾ ಅದಕ್ಕೆ ಫೀ ಕೊಡಬೇಕು ಅಂತಾ ಹೇಳಿರುತ್ತಾರೆ. ಆಗ ದೂರುದಾರರು ಹಾಗೂ ಅವರ ತಂದೆ ಎಷ್ಟು ಎಂದು ಕೇಳಿದಾಗ, ರೂ.15,000/– ಕೊಡಿ ನಿಮ್ಮ ಕೆಲಸ ಮಾಡಿಕೊಡುತ್ತೇನೆ ಅಂತಾ ತಿಳಿಸಿರುತ್ತಾರೆ. ದೂರುದಾರರು ಅಷ್ಟು ಕೊಡಲು ಆಗುವುದಿಲ್ಲಾ ಅಂದಾಗ, ಎದುರುದಾರರು ಎರಡು ಸಾವಿರ ಕಡಿಮೆ ಮಾಡಿ ರೂ.13,000/–ಕೊಡುವಂತೆ ತಿಳಿಸಿರುತ್ತಾರೆ ಹಾಗೂ ಮುಂಗಡವಾಗಿ ರೂ.5,000/– ಕೊಡಿ, ಉಳಿದ ಹಣವನ್ನು ಕೆಲಸ ಮಾಡಿದ ನಂತರ ಕೊಡಿ ಅಂತಾ ಹೇಳಿರುತ್ತಾರೆ. ಅದರಂತೆ ಎದುರುದಾರರಿಗೆ ರೂ.5,000/–ಗಳನ್ನು ಮುಂಗಡವಾಗಿ ದೂರುದಾರರು ಕೊಟ್ಟಿರುತ್ತಾರೆ. ನಂತರ ದಿನಾಂಕ: 14/11/2018ರಂದು ಸಾಯಂಕಾಲ 4–43ಕ್ಕೆ ಎದುರುದಾರರು ಅವರ ಮೊಬೈಲ್ ನಂ.9480717237ರಿಂದ ದೂರುದಾರರ ಮೊಬೈಲ್ ನಂ.9591524959ಕ್ಕೆ ಕರೆ ಮಾಡಿ "ಉತಾರ ಕ್ಲೇಯರ್ ಆಗೇತಿ ನೋಡ, ಖಿಲ್ಲಾ ಮಾಡಸೇನರಿ, ನಾಳೆ ಅಷ್ಟ ಸುದ್ದ ಮಾಡ್ರಿ" ಅಂತಾ ತಿಳಿಸಿರುತ್ತಾರೆ. ಆಗ ದೂರುದಾರರು ಎದುರುದಾರರನ್ನು ಭೇಟಿಯಾಗುತ್ತೇನೆ ಎಂದು ಹೇಳಿ ಫೋನ್ ಇಟ್ಟಿರುತ್ತಾರೆ. ನಂತರ ದಿನಾಂಕ: 16/11/2018ರಂದು ಮುಂಜಾನೆ 10–21 ಗಂಟೆಗೆ ಮತ್ತೊಮ್ಮೆ ಎದುರುದಾರರು ಅವರ ಮೊಬೈಲ್ ನಂ.9480717237ರಿಂದ ದೂರುದಾರರ ಮೊಬೈಲ್ ನಂ.9591524959ಕ್ಕೆ ಕರೆ ಮಾಡಿದಾಗ, ದೂರುದಾರರು ಇನ್ನು ಫೀ ಎಷ್ಟು ಕೊಡಬೇಕು ಅಂತಾ ಕೇಳಿದಾಗ, ರೂ.8,000/– ಅಂತಾ ಹೇಳಿರುತ್ತಾರೆ. ಆಗ ದೂರುದಾರರು ರೂ.5,000/– ಕೊಡುತ್ತೇನೆ ಅಂತಾ ತಿಳಿಸಿದಾಗ, ಎದುರುದಾರರು ರೂ.8,000/– ಕೊಡುವಂತೆ ಹಣಕ್ಕೆ ಒತ್ತಾಯ ಮಾಡಿರುತ್ತಾರೆ. ದೂರುದಾರರು ಎದುರುದಾರರೊಂದಿಗೆ ಇದೇ ಕೇಸ್‌ನ ಸಲುವಾಗಿ 2–ಬಾರಿ ಮಾತನಾಡಿದ್ದನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ ಹಾಗೂ ಎದುರುದಾರರು ಹಣ ಬೇಡಿರುವುದು ಸ್ಪಷ್ಟವಾಗಿ ಮುದ್ರಣವಾಗಿರುತ್ತದೆ.

ii. ದಿ:17/11/2018 ರಂದು ಬೆಳಿಗ್ಗೆ 11–30 ಗಂಟೆಗೆ ದೂರುದಾರರು ಎದುರುದಾರರಿಗೆ ಈಗಾಗಲೇ 5–ಸಾವಿರ ರೂಪಾಯಿ ಲಂಚದ ಹಣ ಕೊಟ್ಟಿದ್ದು, ಇನ್ನು 8–ಸಾವಿರ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ಹಾಗೂ ದೂರುದಾರರ ತಂದೆಗೆ ಅಕ್ಷರ ಜ್ಞಾನ ಇಲ್ಲದ್ದರಿಂದ, ದೂರುದಾರರೇ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಬೆಳಗಾವಿ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 15/2018 ರಲ್ಲಿ ಕಲಂ 7, 13(1) (ಡಿ) ಸಹ ಕಲಂ 13 (2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಪಂಚಾಕ್ಷರಯ್ಯ ಗದಗಯ್ಯಾ ಹಿರೇಮಠ, (ನೆರಳು ಸಾಕ್ಷಿ) 2) ಶ್ರೀ ಸೋಮಲಿಂಗಪ್ಪಾ ಅರ್ಜುನ ಹೂಲಿಕಟ್ಟಿ, ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ

ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿದ್ದ ಧ್ವನಿ ಮುದ್ರಣವನ್ನು ಪ್ಲೇ ಮಾಡಿ, ಸದರಿ ಧ್ವನಿ ಮುದ್ರಣಗಳನ್ನು ಲ್ಯಾಪ್ ಟಾಪ್ ಮೂಲಕ ಎರಡು ಡಿವಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.500/– ಮುಖಬೆಲೆಯ 16–ನೋಟುಗಳು) ಒಟ್ಟು 8,000/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಪಂಚ–2ರವರು ಹೇಳಿದಂತೆ ಪಂಚ–1ರವರು ಒಂದು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯಿಂದ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿಸಿ, ಪಂಚ–1ರವರು ದೂರುದಾರರ ಅಂಗ ಶೋಧನೆ ಮಾಡಿದ ನಂತರ ಸದರಿ ಹಣವನ್ನು ಪಂಚಸಾಕ್ಷಿ–2– ಸೋಮಲಿಂಗಪ್ಪಾ ಅರ್ಜುನ ಹೂಲಿಕಟ್ಟಿರವರ ಮೂಲಕ ದೂರುದಾರರ ಪ್ಯಾಂಟಿನ ಮುಂದಿನ ಬಲಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಸೋಮಲಿಂಗಪ್ಪಾ ಅರ್ಜುನ ಹೂಲಿಕಟ್ಟಿರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಪಂಚಾಕ್ಷರಯ್ಯ ಗದಗಯ್ಯಾ ಹಿರೇಮಠ ಪಂಚ–1ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತಮ್ಮ ಕರವಸ್ತ್ರವನ್ನು ತೆಗೆದು ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿರುತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿ.17.11.2018ರಂದು ಮಧ್ಯಾಹ್ನ 12–30 ರಿಂದ 14–00 ಗಂಟೆಯವರಿಗೆ ಬೆಳಗಾವಿ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ತಮ್ಮ ಸಿಬ್ಬಂದಿಯಿಂದ ಲ್ಯಾಪ್‌ಟಾಪ್ ಮೂಲಕ ಪ್ರಾಯೋಗಿಕ ಪಂಚನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಮಧ್ಯಾಹ್ನ 14–10 ಗಂಟೆಗೆ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಎದುರುದಾರರ ಖಾಸಗಿ ಕಚೇರಿ ಇರುವ ರಾಯಭಾಗದ ಹಳೇ ಪೋಲೀಸ್ ಠಾಣೆಯ ಹತ್ತಿರ ಬಂದು ದೂರುದಾರರು ಹಾಗೂ ನೆರಳುಸಾಕ್ಷಿ ಪಂಚ–

1–ಪಂಚಾಕ್ಷರಯ್ಯ ಗದಗಯ್ಯಾ ಹಿರೇಮಠರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ ಹಾಗೂ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಳ್ಳಬೇಕೆಂದು ತಿಳಿಸಿ, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ಸುಮಾರು 16–30 ಗಂಟೆಗೆ ದೂರುದಾರರು, ನೆರಳು ಸಾಕ್ಷಿ ಮತ್ತು ಎದುರುದಾರರು ಬೋಳದಿಂದ (ಸಂದಿಯಿಂದ) ರಾಯಭಾಗದ ಸಿಂಡಿಕೇಟ್ ಬ್ಯಾಂಕಿನ ಬಲಗಡೆ ಇರುವ ನ್ಯೂಅಜಾದ ಡಿಟಿಪಿ ಮತ್ತು ಜೆರಾಕ್ಸ್ ಅಂಗಡಿಯ ಮುಂದೆ ಬಂದು, ಸ್ವಲ್ಪ ಸಮಯದ ನಂತರ ದೂರುದಾರರು ತಮ್ಮ ಪ್ಯಾಂಟಿನ ಬಲಗಡೆ ಜೇಬಿನಿಂದ ಲಂಚದ ಹಣವನ್ನು ಎದುರುದಾರರಿಗೆ ನೀಡಿದ್ದು, ಆಗ ಎದುರುದಾರರು ಲಂಚದ ಹಣವಾದ ರೂ.8,000/– ಗಳನ್ನು ಪಡೆದು ಎರಡೂ ಕೈಗಳಿಂದ ಎಣಿಸಿ, ಬಲಗೈಯಲ್ಲಿ ಹಿಡಿದುಕೊಂಡಿರುತ್ತಾರೆ. ಆಗ ಕೂಡಲೇ ದೂರುದಾರರು ತಮ್ಮ ಕೈಯಿಂದ ಮುಖ ಒರೆಸಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ಸನ್ನೆ ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ದೂರುದಾರರು ಹಾಗೂ ಎದುರುದಾರರಿದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ಅವರ ಬಲಗೈನಲ್ಲಿದ್ದ ಲಂಚದ ಹಣವನ್ನು ಪಂಚಸಾಕ್ಷಿ–2ರವರಿಗೆ ಕೊಡಲು ತಿಳಿಸಿದ್ದು, ಎದುರುದಾರರು ಅವರ ಬಲಗೈನಲ್ಲಿದ್ದ ಲಂಚದ ಹಣವನ್ನು ಪಂಚಸಾಕ್ಷಿ–2ರವರಿಗೆ ಕೊಟ್ಟಿದ್ದು, ಪಂಚರ ಮೂಲಕ ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಟ್ರಾಪ್ ಮಾಡಿದ ಸ್ಥಳವು ಸಾರ್ವಜನಿಕ ರಸ್ತೆಯ ಪಕ್ಕದಲ್ಲಿರುವ ಅಂಗಡಿಯ ಮುಂದೆ ಇದ್ದುದರಿಂದ ಅಲ್ಲಿ ಜನರು ಸೇರಲು ಪ್ರಾರಂಭಿಸಿದ್ದರಿಂದ, ತನಿಖಾಧಿಕಾರಿಗಳು ದೂರುದಾರರನ್ನು, ಪಂಚಸಾಕ್ಷಿಗಳನ್ನು ಸಿಬ್ಬಂದಿಗಳನ್ನು ಮತ್ತು ಎದುರುದಾರರನ್ನು ಸಂಜೆ 5–20ಕ್ಕೆ ತಹಶೀಲ್ದಾರ್ ರಾಯಭಾಗ, ಇವರ ಕಚೇರಿಯ ಕೊಠಡಿಗೆ ಕರೆದುಕೊಂಡು ಬಂದು ತಹಶೀಲ್ದಾರ್‌ರವರಿಗೆ ಎದುರುದಾರರನ್ನು ಟ್ರಾಪ್ ಮಾಡಿರುವ ವಿಚಾರ ತಿಳಿಸಿ, ತನಿಖೆ ಮುಂದುವರಿಸಲು ಸ್ಥಳ ನೀಡುವಂತೆ ಕೇಳಿಕೊಂಡಿದ್ದು ತಹಶೀಲ್ದಾರ್‌ರವರು ತಮ್ಮ ಕೊಠಡಿಯಲ್ಲೇ ತನಿಖೆ ಮುಂದುವರಿಸಲು ತಿಳಿಸಿದ್ದು, ಅದರಂತೆ ತನಿಖಾಧಿಕಾರಿಗಳು ತನಿಖೆ ಮುಂದುವರೆಸಿ ಎದುರುದಾರರು

ಆಜಾದ್ ಡಿಟಿಪಿ ಮತ್ತು ಜೆರಾಕ್ಸ್ ಸೆಂಟರ್‌ನಿಂದ ತೆಗೆದು ನೀಡಿದ ದೂರುದಾರರ ಜಮೀನಿನ ಉತಾರವನ್ನು ತಮ್ಮ ವಶಕ್ಕೆ ಪಡೆದುಕೊಂದಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ ತಹಶೀಲ್ದಾರ್‌ರವರಿಗೆ ತಿಳಿಸಿದ್ದು, ಅದರಂತೆ ತಹಶೀಲ್ದಾರ್‌ರವರು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸಿದ್ದು, ಸದರಿ ಕಡತದ ದಾಖಲೆಗಳ ಪ್ರತಿಗಳನ್ನು ತಹಶೀಲ್ದಾರ್‌ರವರಿಂದ ಧೃಡೀಕರಿಸಿಕೊಂಡು ವಶಕ್ಕೆ ಪಡೆದಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಟ್ರ್ಯಾಪ್ ಪೂರ್ವದಲ್ಲಿ ಹಾಗೂ ಟ್ರ್ಯಾಪ್ ಸಮಯದಲ್ಲಿ ದೂರುದಾರರು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಗಳನ್ನು ಮೊಬೈಲ್‌ನಲ್ಲಿ ಹಾಗೂ ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿದ್ದು, ಅದರ ಮೆಮೊರಿ ಕಾರ್ಡ್‌ನ್ನು ಲ್ಯಾಪ್‌ಟಾಪ್ಗೆ ಹಾಕಿ, ಡಿವಿಡಿಗಳಿಗೆ ವರ್ಗಾಯಿಸಿರುತ್ತಾರೆ ಹಾಗೂ ಎದುರುದಾರರ ಮೇಲಾಧಿಕಾರಿಯಾದ ಪಾಂಡುರಂಗ್ ಶ್ರೀನಿವಾಸ್ ಕುಲಕರ್ಣಿ, ಪ್ರಭಾರಿ ಶಿರಸ್ತೇದಾರ್, ತಹಶೀಲ್ದಾರ್ ಕಚೇರಿ, ರಾಯಭಾಗ್, ಇವರಿಗೆ ಕೇಳಿಸಲಾಗಿ, ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ಈ ಬಗ್ಗೆ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ಹಾಗೂ ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಗಳನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್‌ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಡಿವಿಡಿಗಳನ್ನು ತಯಾರಿಸಿರುತ್ತಾರೆ.

vii. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "_.. ನಾನು ಅವರ ಬಳಿ ಲಂಚ ಬೇಡಿರುವುದಿಲ್ಲ, ಅವರು ನಿಮ್ಮ ಕೆಲಸ ಮುಗಿದಿದೆ ಅಂತಾ ಹೇಳಿದೆ. ಅವರು ಅವರಿಗೆ ನನ್ನ ಬಳಿ ಬಂದು ಜಮೀನಿನ ಉತಾರ ತೆಗೆದುಕೊಡಿ ಎಂದು ಹೇಳಿದರು, ಆದರೆ ನನಗೆ ಉತಾರವನ್ನು ತೆಗೆದುಕೊಟ್ಟು ಅವರ ನನಗೆ ಸರಿ ಆಗಿದೆ ಅಂತಾ ಹೇಳಿದರು. ಅವರು ನನಗೆ ಲಂಚವನ್ನು ತಗೋರಿ ಅಂತಾ ಹೇಳಿದ್ದು, ನಾನು ನಿಮಗೆ ಬೇಡಿರುವುದಿಲ್ಲಾ ಅಂತಾ ಹೇಳಿದೆ ಅವರು ನನ್ನ ಲಂಚವನ್ನು ತಗೊಳ್ಳಿ ಅಂತ ಹೇಳಿ ಜಬತ್ತಿ ಬಿಡಿದರು. ಅವರು ನಿಮ್ಮ ಕೆಲಸ ಆಗದೆ ಅಂತಾ ಹೇಳಿ ನಾನು ಹೇಳಿ ಹೊರಟಿರುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ದೂರುದಾರರು "ಅಪಾದಿತರು ಸುಳ್ಳು ಬರೆದುಕೊಟ್ಟಿರುತ್ತಾರೆ. ಇವರು ಈ ಮೊದಲು ನನಗೆ ಫೋನ್ ಮಾಡಿ ಹಣ ನೀಡಲು ತಿಳಿಸಿದ್ದರ ಬಗ್ಗೆ ಸ್ಪಷ್ಟವಾಗಿ ಮುದ್ರಣವಾಗಿರುತ್ತದೆ. ಸದರಿ ಎರಡೂ ಕಾಲ್ ರೆಕಾರ್ಡರ್‌ಗಳನ್ನು ನಾನು ತಮಗೆ ಠಾಣೆಯಲ್ಲಿ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ನೀಡಿರುತ್ತೇನೆ" ಅಂತಾ ತಿಳಿಸಿರುತ್ತಾರೆ. ನಂತರ ಪಂಚಸಾಕ್ಷಿ-1ರವರನ್ನು ವಿಚಾರಿಸಿದಾಗ, ಅವರು "ಎದುರುದಾರರು ಬರೆದುಕೊಟ್ಟಿರುವುದು ಸುಳ್ಳು ಇದ್ದು, ಫಿರ್ಯಾದುದಾರರಿಗೆ ಅವರ ಜಮೀನಿನ ಉತಾರ ತೆಗೆಸಿಕೊಟ್ಟ ನಂತರ ಪಕ್ಕದಲ್ಲಿರುವ ವಿಶಾಲ್ ಡಿಜಿಟಲ್ ಸ್ಟುಡಿಯೋ & ಜೆರಾಕ್ಸ್ ಅಂಗಡಿಯ ಮುಂದೆ ಕಟ್ಟೆಯ ಮೇಲೆ ಫಿರ್ಯಾದಿಯಿಂದ ಹಣವನ್ನು ತನ್ನ ಬಲಗೈಯಿಂದ ಸ್ವೀಕರಿಸಿ, ತನ್ನ ಎರಡೂ ಕೈಗಳಿಂದ ಎಣಿಸಿ, ತನ್ನ ಬಲಗೈಯಿಂದ ಹಿಡಿದುಕೊಂಡಿರುವುದನ್ನು ನಾನು ಫಿರ್ಯಾದಿಯೊಂದಿಗೆ ಇದ್ದು ಅವರ ಪಕ್ಕದಲ್ಲಿಯ ನ್ಯೂಅಜಾದ್ ಡಿಟಿಪಿ & ಜೆರಾಕ್ಸ್ ಅಂಗಡಿಯ ಬಾಗಿಲಲ್ಲಿ ನಿಂತು ಕಣ್ಣಾರೆ ನೋಡಿ ಕೇಳಿಸಿಕೊಂಡಿರುತ್ತೇನೆ" ಅಂತಾ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ತನಿಖಾಧಿಕಾರಿಗಳು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ: 17/11/2018 ರಂದು ಸಾಯಂಕಾಲ 16-45 ಗಂಟೆಯಿಂದ ರಾತ್ರಿ 21-30 ಗಂಟೆಯವರೆಗೆ ವಿಶಾಲ್ ಡಿಜಿಟಲ್ ಫೋಟೋ ಸ್ಟುಡಿಯೋ ಮತ್ತು ಜೆರಾಕ್ಸ್ ಅಂಗಡಿಯ ಕಟ್ಟೆಯ ಮೇಲೆ ಮತ್ತು ರಾಯಭಾಗದ ತಹಶೀಲ್ದಾರ್‌ರವರ ಕಚೇರಿಯಲ್ಲಿ ಲ್ಯಾಪ್ ಟಾಪ್‌ನಲ್ಲಿ ಟ್ರಾಪ್ ಮಹಜರ್‌ನ್ನು ಟೈಪ್ ಮಾಡಿಸಿರುತ್ತಾರೆ.

ix. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

x. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 07/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನು ಲಂಚದ ಬೇಡಿಕೆಯ ವಿಷಯವನ್ನು ಫಿರ್ಯಾದುದಾರರಿಗೆ ಕೇಳಿಕೊಂಡಿರುವುದಿಲ್ಲ. ದಿನಾಂಕ:17/11/2018ರಂದು ಫಿರ್ಯಾದುದಾರನು ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಲೆಂದು ಎಸಿಬಿಯವರಿಗೆ ದೂರು ನೀಡಿ, ನಾನು ಸದರಿ ಕೆಲಸಕ್ಕೆ ಲಂಚ ಬೇಡದೇ ಇದ್ದರೂ ನನ್ನ ಮೇಲೆ ಕೊಟ್ಟಿ ದೂರು ನೀಡಿ ಟ್ರ್ಯಾಪ್ ಮಾಡಿಸಿರುತ್ತಾರೆ. ನಾನು ನನ್ನ ಕರ್ತವ್ಯದಲ್ಲಿ ನಿಷ್ಠೆಯನ್ನು ಪಾಲಿಸಿದ್ದೇನೆ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮಗಳನ್ನು ಉಲ್ಲಂಘಿಸಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ, ಇಲ್ಲಿ ಸ್ಪೆಶಲ್ ಕೇಸ್. 70/20ರ ಅಡಿಯಲ್ಲಿ ವಿಚಾರಣೆ ಆರಂಭವಾಗಿದೆ, ಸದರಿ ಪ್ರಕರಣದಲ್ಲಿ ನಾನು ಖಂಡಿತವಾಗಿ ಆರೋಪ ಮುಕ್ತನಾಗುವ ವಿಶ್ವಾಸವಿದ್ದು, ಈ ನಡುವೆ ತಾವು ಸದರಿ ಪ್ರಕರಣವನ್ನು ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದರೆ, ನನಗೆ ತುಂಬಲಾರದ ಹಾನಿಯುಂಟಾಗುತ್ತದೆ. ಆದ್ದರಿಂದ ದಯಾಳುಗಳಾದ ತಾವುಗಳು ಸದರಿ ಸತ್ಯ ಸಂಗತಿಯನ್ನು ಗೌರವಾನ್ವಿತ ಉಪಲೋಕಾಯುಕ್ತರಿಗೆ ಮಂಡಿಸಿ, ನನಗೆ ನ್ಯಾಯ ದೊರಕಿಸಿ ಕೊಡಲು ವಿನಂತಿ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ತನ್ಮೂಲಕ ಪಡೆದುಕೊಂಡಿದ್ದು, ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ

ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

[signature] 2/12/24

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**